# ಫ್ಲಿಪ್ ಕಾರ್ಟ್ ಗ್ರಾಹಕರಿಗೆ ಫ್ಲಿಪ್ ಕಾರ್ಟ್ ನಿಂದ ಹಾಸ್ಪಿಕ್ಯಾಶ್ ಯೋಜನೆ

- **ಐಸಿಐಸಿಐ ಲೊಂಬಾರ್ಡ್ ಸಹಭಾಗಿತ್ವ**
- **ಪ್ರತಿದಿನ 500 ರೂಪಾಯಿಯಿಂದ ನಗದು ಪ್ರಯೋಜನ ಆರಂಭ**
- **ಫ್ಲಿಪ್ ಕಾರ್ಟ್ ಗ್ರಾಹಕರಿಗೆ ವಿನೂತನವಾದ ವಿಮಾ ಯೋಜನೆ**

ಬೆಂಗಳೂರು, ಫೆಬ್ರವರಿ 17, 2021: ಭಾರತದ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆಯಾಗಿರುವ ಫ್ಲಿಪ್ ಕಾರ್ಟ್ ತನ್ನ ಗ್ರಾಹಕರಿಗೆ ವಿಮೆಯ ಸೌಲಭ್ಯವನ್ನು ಒದಗಿಸಲು ಗ್ರೂಪ್ ಸೇಫ್ ಗಾರ್ಡ್ ವಿಮೆಯನ್ನು ಜಾರಿಗೆ ತರುವ ದೃಷ್ಟಿಯಿಂದ ದೇಶದ ಖ್ಯಾತ ವಿಮಾ ಕಂಪನಿಯಾಗಿರುವ ಐಸಿಐಸಿಐ ಲೊಂಬಾರ್ಡ್ ನೊಂದಿಗೆ ಸಹಭಾಗಿತ್ವವನ್ನು ಮಾಡಿಕೊಂಡಿದೆ. ಇತರೆ ಆರೋಗ್ಯ ವಿಮಾ ಪಾಲಿಸಿಗಳಿಗೆ ಹೋಲಿಸಿದರೆ ಈ ಗ್ರೂಪ್ ಸೇಫ್ ಗಾರ್ಡ್ ನ ಪ್ರಯೋಜನಗಳು ಉತ್ತಮವಾಗಿವೆ. ಇವುಗಳಲ್ಲಿ ಪ್ರಮುಖವಾಗಿ ಅನಾರೋಗ್ಯಪೀಡಿತ ಗ್ರಾಹಕರು ಆಸ್ಪತ್ರೆಗೆ ದಾಖಲಾದರೆ ಪ್ರತಿದಿನ ನಗದು ವಿಮೆಯನ್ನು ಪಡೆಯಬಹುದಾಗಿದೆ. ಈ ನಿಗದಿತ ವಿಮಾ ಹಣದಿಂದ ಗ್ರಾಹಕರು ಆಕಸ್ಮಿಕ ವೈದ್ಯಕೀಯ ಅಥವಾ ತುರ್ತು ವೆಚ್ಚಗಳಿಗೆ ಭರಿಸಬಹುದಾಗಿದೆ. ಈ ವಿಮೆಯು ಕೈಗೆಟುಕುವ ದರದಲ್ಲಿ ಲಭ್ಯವಿದ್ದು, ಕಾಗದರಹಿತ ಮತ್ತು ಸರಳವಾಗಿರುತ್ತದೆ. ಅಪಘಾತದಿಂದ ಆಸ್ಪತ್ರೆಗೆ ದಾಖಲಾಗುವುದು ಅಥವಾ ಯೋಜಿತ ಸರ್ಜರಿಗಳು /ಚಿಕಿತ್ಸೆಗಳಿಗೆ ನೆರವಾಗುತ್ತದೆ.

ಆಸ್ಪತ್ರೆಗಳಲ್ಲಿ ದಾಖಲಾಗುವ ವೇಳೆ ಭಾರತೀಯರು ಗಣನೀಯ ಪ್ರಮಾಣದಲ್ಲಿ ವೆಚ್ಚ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ವರದಿಯ ಪ್ರಕಾರ, ಭಾರತದಲ್ಲಿ ಆಸ್ಪತ್ರೆಗೆ ದಾಖಲಾಗುವವರಲ್ಲಿ ತಲಾ ಒಬ್ಬರು ಸರಾಸರಿ 4,452 ದಿಂದ 31,845 ರೂಪಾಯಿ ವೆಚ್ಚವಾಗುತ್ತಿದೆ. ಅದೇ ರೀತಿ ಆಸ್ಪತ್ರೆಗೆ ದಾಖಲಾಗುವುದರಿಮದ ಸರಾಸರಿ ಪ್ರತಿದಿನ 8,164 ರೂಪಾಯಿಗಳು ನಷ್ಟವಾಗುತ್ತಿದೆ. ಐಸಿಐಸಿಐ ಲೊಂಬಾರ್ಡ್ ಫ್ಲಿಪ್ ಕಾರ್ಟ್ ಗ್ರಾಹಕರಿಗೆ ಹಾಸ್ಪಿಕ್ಯಾಶ್ ಮೂಲಕ ಪ್ರಯೋಜನವನ್ನು ನೀಡುತ್ತದೆ. ಗ್ರಾಹಕರು ತುರ್ತು ವೈದ್ಯಕೀಯ ವೆಚ್ಚಗಳು, ಪ್ರಯಾಣ, ಆಸ್ಪತ್ರೆಯಿಂದ ಡಿಸ್ ಚಾರ್ಜ್ ನಂತರದ ವೆಚ್ಚಗಳು ಅಥವಾ ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ನಷ್ಟವಾಗುವ ಆದಾಯಕ್ಕೆ ಪರಿಹಾರವನ್ನು ನೀಡುತ್ತದೆ.

ಫ್ಲಿಪ್ ಕಾರ್ಟ್ ನ ಫಿನ್ ಟೆಕ್ ಅಂಡ್ ಪೇಮೆಂಟ್ಸ್ ಗ್ರೂಪ್ ನ ಮುಖ್ಯಸ್ಥ ರಂಜಿತ್ ಬೊಯನಪಲ್ಲಿ ಅವರು ಮಾತನಾಡಿ, ``ನಮ್ಮ ಗ್ರಾಹಕರಿಗೆ ಸದಾ ಮೌಲ್ಯಾಧಾರಿತ ಪರಿಹಾರಗಳನ್ನು ನೀಡುವುದಕ್ಕೆ

ಗಮನಹರಿಸುತ್ತಿದ್ದೇವೆ. ಗ್ರಾಹಕರು ಆರೋಗ್ಯ ವಿಮೆಯ ಮಹತ್ವದ ಬಗ್ಗೆ ತಿಳಿದುಕೊಳ್ಳುವ ಪ್ರಮಾಣ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಗ್ರಾಹಕರಿಗೆ ಆರೋಗ್ಯ ರಕ್ಷಣೆ ಯೋಜನೆಯನ್ನು ನೀಡುವ ಒನ್ ಸ್ಟಾಪ್ ಸಲೂಶನ್ ಅನ್ನು ಫ್ಲಿಪ್ ಕಾರ್ಟ್ ನೀಡುತ್ತದೆ ಎಂಬುದನ್ನು ಖಚಿತಪಡಿಸಲು ಬಯಸಿದ್ದೇವೆ. ಹಾಸ್ಪಿಕ್ಯಾಶ್ ಪ್ರಯೋಜನದೊಂದಿಗೆ, ಗ್ರಾಹಕರು ಹೆಚ್ಚುವರಿ ವೆಚ್ಚಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳಬಹುದಾಗಿದೆ. ಈ ಮೂಲಕ ತಮ್ಮ ಉಳಿತಾಯದ ಹಣ ಕರಗದಂತೆ ನೋಡಿಕೊಳ್ಳಬಹುದಾಗಿದೆ. ನಮ್ಮ ಗ್ರಾಹಕರ ಪ್ರಯಾಣವನ್ನು ಸರಳೀಕರಣಗೊಳಿಸುವುದು ಮತ್ತು ಅವುಗಳನ್ನು ಉತ್ತಮವಾಗಿ ತಿಳಿಸಲು ನಮ್ಮ ಪ್ಲಾಟ್ ಫಾರ್ಮ್ ನಲ್ಲಿ ಉದ್ಯಮದ ಅತ್ಯುತ್ತಮವಾದ ವಿಮಾ ಆಯ್ಕೆಗಳನ್ನು ನೀಡುತ್ತೇವೆ" ಎಂದರು.

ಐಸಿಐಸಿಐ ಲೊಂಬಾರ್ಡ್ ನ ಕಾರ್ಯಕಾರಿ ನಿರ್ದೇಶಕ ಸಂಜೀವ್ ಮಂತ್ರಿ ಅವರು ಮಾತನಾಡಿ, ``ಐಸಿಐಸಿಐ ಲೊಂಬಾರ್ಡ್ ನಲ್ಲಿ ನಾವು ಆವಿಷ್ಕಾರಕ ಮತ್ತು ಸಂಪರ್ಕರಹಿತವಾದ ವಿಮಾ ಪರಿಹಾರಗಳನ್ನು ಗ್ರಾಹಕರಿಗೆ ನೀಡುತ್ತಿದ್ದೇವೆ. ಈ ನಿಟ್ಟಿನಲ್ಲಿ ನಾವು ಫ್ಲಿಪ್ ಕಾರ್ಟ್ ನೊಂದಿಗೆ ಪಾಲುದಾರಿಕೆಯನ್ನು ಮಾಡಿಕೊಂಡಿರುವುದಕ್ಕೆ ನಮಗೆ ಸಂತಸವಾಗುತ್ತಿದೆ. ಗ್ರೂಪ್ ಸೇಫ್ ಗಾರ್ಡ್ ವಿಮೆಯಡಿ ನಮ್ಮ ಹಾಸ್ಪಿಕ್ಯಾಶ್ ಪ್ರಯೋಜನಗಳನ್ನು ಕೈಗೆಟುಕುವ ಮತ್ತು ಅನುಕೂಲಕರವಾದ ರೀತಿಯಲ್ಲಿ ನೀಡುತ್ತಿದ್ದೇವೆ. ಇದರಿಂದ ಗ್ರಾಹಕರು ಆಸ್ಪತ್ರೆಗೆ ದಾಖಲಾದ ಸಂದರ್ಭದಲ್ಲಿ ದೈನಂದಿನ ವೆಚ್ಚವನ್ನು ಭರಿಸಿಕೊಳ್ಳಲು ಸಾಧ್ಯವಾಗುತ್ತದೆ. ಗ್ರಾಹಕರಿಗೆ ಅಗತ್ಯವಿರುವ ಸಂದರ್ಭದಲ್ಲಿ ನೆರವಾಗುವ ಮೂಲಕ ನಿಭಾಯೆ ವಾದೆ ಎಂಬುದನ್ನು ಧ್ಯೇಯವಾಗಿರಿಸಿಕೊಂಡಿದ್ದೇವೆ" ಎಂದು ತಿಳಿಸಿದರು.

| **Feature** | **Provisions** |
|---|---|
| Daily Cash Benefit | Rs. 500 to Rs. 2,000 per day |
| Inclusions | Accident and illness related hospitalization |
| Sum insured | Rs 500, Rs 1000, Rs 1500, Rs 2000 per day (lump sum benefit on hospitalization - cover for up to 90 days of hospitalization) |
| Hospital network | More than 6,500 |
| Health Claim Ratio | 99.87%* |

| | |
|---|---|
| Waiting Period | 30 Days |
| Minimum hospitalization | 24 hours |

**as on date. Provided by ICICI Lombard*

ಭಾರತದ ಗ್ರಾಹಕರ ಅಗತ್ಯತೆಗಳು ಮತ್ತು ಆದ್ಯತೆಗಳನ್ನು ಅರ್ಥ ಮಾಡಿಕೊಂಡಿರುವ ಫ್ಲಿಪ್ ಕಾರ್ಟ್ ಕಳೆದ ಹಲವಾರು ವರ್ಷಗಳಿಂದ ಜೀವನ, ಆರೋಗ್ಯ, ಮೋಟರು ಮತ್ತು ಸೈಬರ್ ಗಾಗಿ ವಿಮಾ ಸೇವೆಗಳಲ್ಲಿ ತೊಡಗಿಸಿಕೊಂಡಿದೆ. ಫ್ಲಿಪ್ ಕಾರ್ಟ್ ಲಕ್ಷಾಂತರ ಗ್ರಾಹಕರಿಗೆ ಅವರ ವೈವಿಧ್ಯಮಯವಾದ ಅಗತ್ಯತೆಗಳ ಆಧಾರದ ಮೇಲೆ ಕಸ್ಟಮೈಸ್ಡ್ ಮಾಡಿದ ಮತ್ತು ಸರಳೀಕೃತವಾದ ವಿಮಾ ಯೋಜನೆಗಳಿಗೆ ಪ್ರವೇಶವನ್ನು ಕಲ್ಪಿಸುವ ಗುರಿಯನ್ನು ಹೊಂದಿದೆ.

ಐಸಿಐಸಿಐ ಲೊಂಬಾರ್ಡ್ ಆವಿಷ್ಕಾರಕ ಮತ್ತು ತಂತ್ರಜ್ಞಾನ ಆಧಾರಿತ ನಾನ್-ಲೈಫ್ ಇನ್ಶೂರೆನ್ಸ್ ಸಲೂಶನ್ಸ್ ಪರಿಚಯಿಸುವುದರಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಯಾಗಿದೆ. ಇದಲ್ಲದೇ, ಗ್ರಾಹಕರಿಗೆ ಪಾಲಿಸಿ ಖರೀದಿ, ನವೀಕರಣ, ಕ್ಲೇಮ್ ಸೆಟಲ್ಮೆಂಟ್ ಸೇರಿದಂತೆ ಇನ್ನಿತರೆ ಸೇವೆಗಳನ್ನು ತಡೆರಹಿತವಾಗಿ ನೀಡುವ ನಿಟ್ಟಿನಲ್ಲಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಮತ್ತು ರೊಬೋಟಿಕ್ಸ್ ನಂತಹ ವ್ಯವಸ್ಥೆಗಳನ್ನು ಅಳವಡಿಸಿಕೊಂಡಿದೆ. ಈ ಮೂಲಕ ಗ್ರಾಹಕರನ್ನು ಸಬಲರನ್ನಾಗಿ ಮಾಡುತ್ತಿದೆ ಮತ್ತು ಅತ್ಯುತ್ತಮ ದರ್ಜೆಯ ವಿಮೆಯ ಪರಿಹಾರಗಳನ್ನು ಗ್ರಾಹಕರಿಗೆ ನೀಡುತ್ತಿದೆ.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market and now Flipkart Wholesale, the Flipkart Group will continue to steer the transformation of commerce in India through technology.

**For more information, please contact media@flipkart.com**

**About ICICI Lombard General Insurance Company Ltd**

We are the leading private-sector non-life insurer in India based on gross direct premium income in fiscal 2020 (Source: IRDAI). We offer our customers a comprehensive and well-diversified range of products, including motor, health, crop, fire, personal accident, marine, engineering and liability insurance, through multiple distribution channels. More details are available at www.icicilombard.com.

**For details, contact**


| | |
|---|---|
| **ICICI Lombard GIC Ltd.**<br>Seema Jadhav<br>corporate.communication@icicilombard.com<br>Tel: +91 7045926209 | **Adfactors PR**<br>Sailee Nayak<br>sailee.nayak@adfactorspr.com<br>Tel: +91 99301667115 |